# "ರಾಮರಾಜ್ಯ"ದ ರಾಜನೀತಿ

**ಶಶಿಕಲಾ ಶ್ರೀಧರ**

**ಇಂದಿನ ರಾಜಕೀಯ ಸಂದರ್ಭದಲ್ಲಿ ರಾಮರಾಜ್ಯ ಕಲ್ಪನೆಯು ಗಾಳಿಗೋಪುರದಂತೆ ಕಂಡುಬರುತ್ತದೆ. ಆದರೂ ಇದನ್ನು ಅನುಷ್ಠಾನಕ್ಕೆ ತರುವುದು ಅಸಾಧ್ಯ ಎಂದು ಹೇಳುವಂತಿಲ್ಲ. ಈ ಆದರ್ಶದ ಕಲ್ಪನೆ ಮನಸ್ಸಿನಲ್ಲಿದ್ದರೆ ಸ್ವಲ್ಪವಾದರೂ ಸುಧಾರಣೆ ಆಗಬಹುದು. ಬೆಂಗಳೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾದ ಶ್ರೀಮತಿ ಶಶಿಕಲಾ ಅವರ ಈ ಲೇಖನದಲ್ಲಿ ರಾಮರಾಜ್ಯದ ಒಂದು ಮಿಂಚುನೋಟ ನಮಗೆ ದೊರೆಯುತ್ತದೆ.**

ಆದಿ ಕವಿ ವಾಲ್ಮೀಕಿಯಿಂದ ರಚಿತವಾದುದು ಆದಿಕಾವ್ಯ ರಾಮಾಯಣ. ತ್ರೇತಾಯುಗದ ಶ್ರೀಮನ್ನಾರಾಯಣನ ಅವತಾರ ಪುರುಷನಾದ ಶ್ರೀರಾಮಚಂದ್ರಪ್ರಭುವೇ ಈ ಕಾವ್ಯದ ಕಥಾ ನಾಯಕ. ಈ ಪುರುಷೋತ್ತಮನಾದ ರಾಮ ನಡೆದುತೋರಿದ ದಾರಿಯೇ ರಾಮಾಯಣ. ಇದು ಕಾವ್ಯವೂ ಹೌದು, ಧ್ಯಾನಸಿದ್ಧರಿಗೆ ಯೋಗಿಗಳಿಗೆ ಗೋಚರವಾದ ಪರಮಸತ್ಯವೂ ಹೌದು.

ಸುತನಾಗಿ, ಪತಿಯಾಗಿ, ಅಗ್ರಜನಾಗಿ, ಪ್ರಜಾಪಿತನಾಗಿ, ಚಕ್ರವರ್ತಿಯಾಗಿ ಈ ಎಲ್ಲ ಪಾತ್ರಗಳಲ್ಲೂ ಪರಮ ಆದರ್ಶವನ್ನೇ ಎತ್ತಿಹಿಡಿದ ಈ ಮಹಾನಾಯಕ ದಶರಥನ ಕಣ್ಮಣಿ, ಸೀತಾ ಮಾತೆಯ ಪ್ರಾಣಪ್ರಿಯ, ಲಕ್ಷ್ಮಣ ಭರತಶತ್ರುಘ್ನರ ಪರಮ ಪ್ರಿಯಾಗ್ರಜ, ಅಯೋಧ್ಯೆಯ ಎಲ್ಲ ಪ್ರಜೆಗಳ ತಂದೆ, ಯೋಗಿಗಳ ಬಕ್ತರ ಹೃದಯೇಶ್ವರ. "ರಾಮರಾಜ್ಯ" ಎಂಬುದು "ಆದರ್ಶ ರಾಜ್ಯಭಾರ"ಕ್ಕೆ ಪರ್ಯಾಯ ಪದ.

ರಾಮಭಕ್ತಿಯನ್ನೇ ತಾರಕಶಕ್ತಿಯನ್ನಾಗಿ ಹೊಂದಿದ್ದ ಮಹಾತ್ಮಾ ಗಾಂಧೀಜಿಯವರ ನಿತ್ಯಪಾರಾಯಣ ಗ್ರಂಥ ರಾಮಾಯಣ. ಅವರ ಮಾತು ಮತ್ತು ಮನಸ್ಸು ಎರಡರಲ್ಲೂ ಶ್ರೀರಾಮನಾಮ ಸದಾ ತುಂಬಿರುತ್ತಿತ್ತು. ಸ್ವತಂತ್ರ ಭಾರತ ನಿರ್ಮಾಣದ ಪ್ರಥಮ ರೂವಾರಿಯಾದ ಅವರು ಸ್ವತಂತ್ರ ಭಾರತದಲ್ಲಿ "ರಾಮರಾಜ್ಯ"ದ ಕನಸು ಕಂಡವರು. ಇದಕ್ಕಾಗಿ ಹಗಲೂ ಇರುಳೂ ಜೀವ ತೇದು ತಮ್ಮ ಪವಿತ್ರ ಬಾಳನ್ನು ಭಾರತಾಂಬೆಗೇ ಬಲಿಕೊಟ್ಟು ಅಮರರಾದರು. ಈ ಮಹಾತ್ಮರು ಕಂಡ "ರಾಮರಾಜ್ಯ" ಯಾವುದು?

### ರಾಜ ಹೇಗಿದ್ದರೆ ರಾಜ್ಯ ರಾಮರಾಜ್ಯವಾಗುವುದು?

ಇನಕುಲವಂಶದ ರಾಜರುಗಳು ಏಕಪ್ರಭುತ್ವ ಪಡೆದವರು. ಆಳುವ ಅರಸರು ಪೂರ್ಣ ಅಧಿಕಾರವುಳ್ಳವರು ಆಗಿದ್ದರೂ ಅವರ ಕೈಗಳು ಧರ್ಮದ ನೀತಿಗಳಿಗೆ ಬಿಗಿಯಾಗಿ ಕಟ್ಟಿಹಾಕಲ್ಪಟ್ಟಿದ್ದವು. ರಾಜನಾದವನು ಮಹಾವಿಷ್ಣುವಿನ ಪ್ರತಿನಿಧಿಯಾಗಿ ನಿಂತು ರಾಜ್ಯಭಾರ ಮಾಡಬೇಕು. ಶುದ್ಧವಾದ ಶಿಸ್ತಿನ ಜೀವನವನ್ನು ನಡೆಸಬೇಕು. ಸತ್ಯ, ಧರ್ಮ, ನ್ಯಾಯಗಳಿಂದ ಕೂಡಿ ರಾಜ್ಯಭಾರ ಮಾಡಿ ತನ್ನ ಪ್ರಜೆಗಳಿಗೆ ತಾನೇ ಒಂದು ಆದರ್ಶವ್ಯಕ್ತಿಯಾಗಿ ಮಾದರಿಯಾಗಿ ನಿಲ್ಲಬೇಕು. ಕಾರ್ಯದಕ್ಷತೆ, ಸತ್ಯ, ಆರ್ಜವ, ಇವು ರಾಜನಲ್ಲಿರಬೇಕಾದ ದೊಡ್ಡ ಗುಣಗಳು. **ಯಥಾ ರಾಜಾ ತಥಾ ಪ್ರಜಾ** ಎಂಬಂತೆ ಅವನ ಪ್ರಜೆಗಳಿಗೆ ಅವನೇ ಮಾದರಿ. ಪ್ರಜೆಗಳ ಹಿತವೇ ರಾಜನ ಮತ. ಪ್ರಜೆಗಳನ್ನು ತನ್ನ ಮಕ್ಕಳಂತೆ ಪಾಲಿಸಿದರೆ ಆ ಪ್ರಜೆಗಳೇ ಸುಭದ್ರಕೋಟೆಯಾಗಿ ತಮ್ಮ ರಾಜನ ಸಂರಕ್ಷಣೆಗೆ ಬದ್ಧಕಂಕಣರಾಗಿ ನಿಲ್ಲುತ್ತಾರೆ. ಆದ್ದರಿಂದ ಪ್ರಜಾರಕ್ಷಣೆಯೇ ರಾಜಧರ್ಮದ ಪರಮಸಾರ. ರಾಜನು ವೇಷಾಂತರದಲ್ಲಿ ನಗರ ಪರ್ಯಟನೆ ಮಾಡಿ ಪ್ರತ್ಯಕ್ಷವಾಗಿ ತನ್ನ ಪ್ರಜೆಗಳ ಸುಖದುಃಖಗಳನ್ನು ಅರಿಯಬೇಕು.

### "ರಾಮರಾಜ್ಯ"ದ ಪ್ರಜೆಗಳು ಹೇಗಿರಬೇಕು?

"ರಾಮರಾಜ್ಯ"ದಲ್ಲಿ ರಾಜನಿಗೆ ಹೇಗೆ ಕರ್ತವ್ಯಗಳುಂಟೋ ಪ್ರಜೆಗಳಿಗೂ ಅವರದೇ ಆದ ಜವಾಬ್ದಾರಿ ಇದೆ. ತ್ರೇತಾಯುಗದ ರಾಮರಾಜ್ಯದ ಪ್ರಜೆಗಳು ಇಂಗಿತಜ್ಞರು, ಕುಶಲರು, ಬುದ್ಧಿವಂತರು, ಸರಸಿಗಳು, ಉದಾರಿಗಳು, ಸುಖಿಗಳು, ಧರ್ಮಪರರು, ಸಂಯಮಿಗಳು, ದಾನಿಗಳು, ವಿದ್ಯಾವಂತರು, ತೇಜೋವಂತರು, ದೀರ್ಘಾಯುಷಿಗಳು, ಆಸ್ತಿಕರು, ಜಿತೇಂದ್ರಿಯರು, ನಿಯಮಸ್ಥರು, ವಿನಯಗುಣ ಸಂಪನ್ನರು, ತಮ್ಮ ನಾಯಕನ ಕ್ಷೇಮಾಭಿಲಾಷಿಗಳು ಆಗಿದ್ದರು. ತಮ್ಮ ಪೌರ ಹಕ್ಕುಗಳಿಗಾಗಿ ಹೊಡೆದಾಡದೆ ತಮ್ಮ ಬಾಧ್ಯತೆಗಳನ್ನು ಅರಿತವರಾಗಿದ್ದರು. ತಮ್ಮ ನಾಗರಿಕ ಹೊಣೆಗಳನ್ನು ಅರಿತಿದ್ದರು.

### ರಾಜ್ಯದ ಪುರೋಹಿತರು ಹೇಗಿರಬೇಕು?

ಪುರದ ಹಾಗೂ ಪುರಾಧೀಶನ ಹಿತವನ್ನು ಸದಾ ಬಯಸುವ ವಸಿಷ್ಠ ಮತ್ತು ವಾಮದೇವರಂತಹ ಪುರೋಹಿತರು ಇರಬೇಕು. ಒಳ್ಳೆಯವರನ್ನು ಕಾಪಾಡುವುದರಲ್ಲಿಯೂ ಕೆಟ್ಟವರನ್ನು ದಮನ ಮಾಡುವುದರಲ್ಲಿಯೂ ಯಾರು ಸಹಾಯಕರಾಗುತ್ತಾರೆಯೋ ಅಂತಹವರನ್ನೇ ಪುರೋಹಿತರನ್ನಾಗಿ ನಿಯಮಿಸಿಕೊಳ್ಳಬೇಕು.

### ಪ್ರಧಾನಿಗಳು ಹಾಗೂ ಇತರ ಮಂತ್ರಿಗಳು ಹೇಗಿರಬೇಕು?

ಸಮಸ್ತ ಮಂತ್ರ ವಿಚಾರಗಳಲ್ಲಿ ಕುಶಲರೂ, ಕಾರ್ಯಗಳಲ್ಲಿ ಆಸಕ್ತರೂ, ರಾಜನ ಇಂಗಿತವನ್ನು ಬಲ್ಲವರೂ ಅವನಿಗೆ ಹಿತರೂ ಪ್ರಿಯರೂ, ಸಮಸ್ತ ವಿದ್ಯೆಗಳಲ್ಲಿ ಪ್ರವೀಣರೂ, ವಿನಯ ಸಂಪನ್ನರೂ, ಜಿತೇಂದ್ರಿಯರೂ, ದೃಢವಾದ ಪರಾಕ್ರಮವುಳ್ಳವರೂ, ಧೈರ್ಯಶಾಲಿಗಳೂ, ಕೋಪವಿಲ್ಲದವರೂ, ಅಸತ್ಯವನ್ನು ನುಡಿಯದವರೂ, ಸಮಸ್ತವ್ಯವಹಾರದಲ್ಲಿ ಕೌಶಲ್ಯವುಳ್ಳವರೂ ವಿಶ್ವಾಸಕ್ಕೆ ಪೂರ್ಣಯೋಗ್ಯರೂ ಭಕ್ತರೂ ಮಾನ್ಯರೂ ಕಾರ್ಯ ದುರಂಧರರೂ, ದೂರಾಲೋಚನೆ ಉಳ್ಳವರೂ ರಾಜ್ಯಶಾಸ್ತ್ರ ವಿಶಾರದರೂ ದಕ್ಷರೂ ಪರಾಕ್ರಮಿಗಳೂ ನೀತಿಕುಶಲರೂ ಹಣ

ದಾಸೆಗೆ ಒಳಗಾಗದವರೂ ಆತ್ಮಗೌರವವುಳ್ಳವರೂ—ಆಗಿರಬೇಕು.

ಇದುವರೆವಿಗೂ "ರಾಮರಾಜ್ಯ"ದ ರಾಜ, ಮಂತ್ರಿ, ಪುರೋಹಿತ ಹಾಗೂ ಪ್ರಜೆಗಳ ಗುಣನಡತೆಗಳು ಹೇಗಿರಬೇಕೆಂಬುದನ್ನು ನೋಡಿದೆವು. ಇನ್ನು ಇವರೆಲ್ಲರೂ ಸೇರಿ ನಡೆಸುವ ರಾಜ್ಯಾಡಳಿತ ಹೇಗಿರಬೇಕು ಎಂಬ ವಿಚಾರವನ್ನು ಮೂಲರಾಮಾಯಣದಲ್ಲಿ ಮಹರ್ಷಿ ವಾಲ್ಮೀಕಿಗಳು ಯಾವ ಸಂದರ್ಭದಲ್ಲಿ ಹೇಗೆ ವಿವರಿಸಿದ್ದಾರೆ ಎಂಬುದನ್ನು ನೋಡೋಣ. ಚಿತ್ರಕೂಟಪರ್ವತದಲ್ಲಿ ಸೀತಾಲಕ್ಷ್ಮಣಸಮೇತನಾಗಿ ಶ್ರೀರಾಮನು ವನವಾಸ ಮಾಡುತ್ತಿದ್ದ ಸಂದರ್ಭ. ಭರತನು ಶ್ರೀರಾಮನ ದರ್ಶನಕ್ಕಾಗಿ ಬಂದಾಗ, ಶ್ರೀರಾಮಭರತರ ನಡುವೆ ನಡೆಯುವ ಪ್ರಸಿದ್ಧ ಸಂಭಾಷಣೆಯಲ್ಲಿ ಆದರ್ಶ ಹಾಗೂ ವ್ಯವಸ್ಥಿತ ಸರಕಾರದ ರಾಜ್ಯಾಡಳಿತ ಹೇಗಿರಬೇಕೆಂಬುದನ್ನು ಶ್ರೀರಾಮ ವಿವರಿಸುತ್ತಾನೆ. ವಾಲ್ಮೀಕಿ ರಾಮಾಯಣದ ಅಯೋಧ್ಯಾಕಾಂಡದ ೧೦೦ನೇ ಸರ್ಗದಲ್ಲಿ ಈ ವಿಷಯ ಬೋಧನೀಯವಾಗಿದ್ದು ಅಂದಿಗೂ ಇಂದಿಗೂ ಎಂದೆಂದಿಗೂ ಎಲ್ಲ ಆಡಳಿತಕ್ಕೂ ಅನ್ವಯಿಸುತ್ತದಲ್ಲದೆ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಸರಳ, ಸುಂದರರೂಪದಲ್ಲಿದೆ. ಅದಕ್ಕೆ ಸಂಬಂಧಿಸಿದ ಕೆಲವು ಶ್ಲೋಕಗಳ ಭಾವಾರ್ಥವನ್ನು ಕೆಳಗೆ ಕೊಡಲಾಗಿದೆ.

### ಮಂತ್ರಿಗಳು ಮತ್ತು ಮಂತ್ರಾಲೋಚನೆ

ಕಚ್ಚಿದಾತ್ಮಸಮಾಃ ಶೂರಾಃ ಶ್ರುತವಂತೋ ಜಿತೇಂದ್ರಿಯಾಃ |
ಕುಲೀನಾಶ್ಚೇಙ್ಗಿತಜ್ಞಾಶ್ಚ ಕೃತಾಸ್ತೇ ತಾತ ಮಂತ್ರಿಣಃ || (೧೫)

ಒಂದು ರಾಜ್ಯದ ಭದ್ರತೆ ಮತ್ತು ಸಂಪತ್ತು ರಾಜನಿಗೆ ಸಮಾನರಾದ ಶೂರರೂ, ವಿದ್ವಾಂಸರೂ, ಜಿತೇಂದ್ರಿಯರೂ, ಸತ್ಕುಲಪ್ರಸೂತರೂ, ಇತರರ ಇಂಗಿತವನ್ನು ನೋಡುತ್ತಲೇ ತಿಳಿಯಲು ಸಮರ್ಥರಾದವರೂ ಆದ ಮಂತ್ರಿಗಳು ಹಾಕುವ ಭದ್ರಬುನಾದಿಯನ್ನು ಅವಲಂಬಿಸಿದೆ.

ಮಂತ್ರೋ ವಿಜಯಮೂಲಂ ಹಿ ರಾಜ್ಞಾಂ ಭವತಿ ರಾಘವ |
ಸುಸಂವೃತೋ ಮಂತ್ರಧರೈರಮಾತ್ಯೈಃ ಶಾಸ್ತ್ರಕೋವಿದೈಃ|| (೧೬)

ನಿಷ್ಠಾವಂತರಾದ, ಚತುರರಾದ, ನೀತಿಶಾಸ್ತ್ರವಿಶಾರದರಾದ ಮಂತ್ರಿಗಳಿಂದ ಗುಟ್ಟಾಗಿ ಇಡಲ್ಪಡುವ ಮಂತ್ರಾಲೋಚನೆಯು ರಾಜ್ಯದ ಎಲ್ಲ ವ್ಯವಹಾರಗಳಲ್ಲಿ ರಾಜರ ವಿಜಯಕ್ಕೆ ಮುಖ್ಯ ಕಾರಣವಾಗುತ್ತದೆ.

ಏಕೋಽಪ್ಯಮಾತ್ಯೋ ಮೇಧಾವೀ ಶೂರೋ ದಕ್ಷೋ ವಿಚಕ್ಷಣಃ |
ರಾಜಾನಂ ರಾಜಮಾತ್ರಂ ವಾ ಪ್ರಾಪಯೇನ್ಮಹತೀಂ ಶ್ರಿಯಮ್|| (೨೪)

ಮೇಧಾವಿಯೂ ವಿವೇಕಿಯೂ ಶೂರನೂ ದಕ್ಷನೂ ವಿಚಕ್ಷಣನೂ ಆಗಿರುವ ಒಬ್ಬನೇ ಒಬ್ಬ ಮಂತ್ರಿ ಇದ್ದರೂ ಅವನು ರಾಜನಿಗೂ ರಾಜ್ಯಾಡಳಿತವನ್ನು ನಿರ್ವಹಿಸುವವನಿಗೂ ಮಹತ್ತರವಾದ ಶ್ರೇಯಸ್ಸನ್ನು ಉಂಟುಮಾಡಬಲ್ಲನು.

ಅಮಾತ್ಯರು ಪ್ರಾಮಾಣಿಕರಾಗಿರಬೇಕು, ತಮ್ಮ ಬಂಧುಬಳಗದವರಿಗಾಗಿ ಅಧಿಕಾರದ ದುರುಪಯೋಗಪಡಿಸಿಕೊಳ್ಳಬಾರದು. ಒಂದು ಪಕ್ಷ ರಾಜನೇ ತನ್ನ ಪ್ರಜೆಗಳಿಗೆ ತೊಂದರೆಯಾಗುವಂತೆ ತಪ್ಪಿನಡೆದರೆ ಅದನ್ನು ಧೈರ್ಯವಾಗಿ ಖಂಡಿಸಬೇಕು. ರಾಜನ ಹೊಗಳುಭಟ್ಟರಾಗಿರಬಾರದು.

ಕಚ್ಚಿನ್ಮಂತ್ರಯಸೇ ನೈಕಃ ಕಚ್ಚಿನ್ನ ಬಹುಭಿಃ ಸಹ |
ಕಚ್ಚಿತ್ತೇ ಮಂತ್ರಿತೋ ಮಂತ್ರೋ ರಾಷ್ಟ್ರಂ ನ ಪರಿಧಾವತಿ || (೧೮)
ಕಚ್ಚಿದರ್ಥಂ ವಿನಿಶ್ಚಿತ್ಯ ಲಘುಮೂಲಂ ಮಹೋದಯಮ್|
ಕ್ಷಿಪ್ರಮಾರಭಸೇ ಕರ್ಮ ನ ದೀರ್ಘಯಸಿ ರಾಘವ || (೧೯)

ನಾಯಕ ತಾನೊಬ್ಬನೇ ಕುಳಿತು ರಾಜ್ಯಾಂಗದ ಮುಖ್ಯ ವಿಷಯಗಳ ಮಂತ್ರಾಲೋಚನೆ ನಡೆಸಬಾರದು. ಹಾಗಾದಲ್ಲಿ ದೋಷಗಳು ಅರಿವಿಗೆ ಬರುವುದಿಲ್ಲ. ಆದ್ದರಿಂದ ಚತುರರಾದ ಕೆಲವೇ ಮಂತ್ರಿಗಳೊಡನೆ ಮಂತ್ರಾಲೋಚನೆ ನಡೆಸಬೇಕು. ಹೆಚ್ಚು ಮಂದಿ ಇದ್ದರೆ ಮಂತ್ರಾಲೋಚನೆ ರಹಸ್ಯವಾಗಿ ಉಳಿಯುವುದಿಲ್ಲ. ಯಾವುದೇ ಮಂತ್ರಾಲೋಚನೆ ಶತ್ರುವಿಗೆ ತಿಳಿಯಬಾರದು.

ಸುಲಭವೂ ಕಡಿಮೆ ವೆಚ್ಚದಲ್ಲಿ ಸಾಧ್ಯವೂ ಹೆಚ್ಚು ಲಾಭದಾಯಕವೂ ಆದ ಅರ್ಥಸಾಧನೆಯ ಕಾರ್ಯಗಳಾವುವೋ ಅದನ್ನು ಮೊದಲೇ ನಿಶ್ಚಯಿಸಿ ನಿಧಾನಿಸದೆ ಬೇಗ ಪ್ರಾರಂಭಿಸಬೇಕು. ಏಕೆಂದರೆ, ಕ್ಷಿಪ್ರಮಕ್ರಿಯಮಾಣಸ್ಯ ಕಾಲಃ ಪಿಬತಿ ತತ್ಫಲಮ್—"ಕಾರ್ಯವನ್ನು ಸಕಾಲದಲ್ಲಿ ಶೀಘ್ರವಾಗಿ ಮಾಡದಿದ್ದರೆ, ದೀರ್ಘಾವಧಿಯ ಆ ಕಾಲವೇ ಫಲವನ್ನು ನುಂಗಿಬಿಡುತ್ತದೆ." ಇಲ್ಲಿ ಮತ್ತೊಂದು ಮುಖ್ಯ ವಿಷಯವನ್ನೂ ಹೇಳುತ್ತಾರೆ: ತಸ್ಮಾದೇಕೈಕಶಸ್ತಾವತ್ ಬ್ರುವಂತು ಸಚಿವಾಸ್ತವ—"ಮಂತ್ರಾಲೋಚನೆ ನಡೆಯುತ್ತಿರುವಾಗ, ವಾದವಿವಾದಗಳು ನಡೆದಾಗ ಒಬ್ಬೊಬ್ಬರೇ ತಮ್ಮ ಅಭಿಪ್ರಾಯಗಳನ್ನು ಹೇಳಬೇಕು. ಎಲ್ಲರೂ ಒಟ್ಟೊಟ್ಟಿಗೇ ಮಾತನಾಡಬಾರದು. ಅದು ಸಭೆಯ ಗೌರವಕ್ಕೆ ಧಕ್ಕೆಯನ್ನುಂಟುಮಾಡುವುದು."

### ರಾಯಭಾರಿ

ಕಚ್ಚಿಜ್ಜಾನಪದೋ ವಿದ್ವಾನ್ ದಕ್ಷಿಣಃ ಪ್ರತಿಭಾನವಾನ್ |
ಯಥೋಕ್ತವಾದೀ ದೂತಸ್ತೇ ಕೃತೋ ಭರತ ಪಂಡಿತಃ|| (೩೫)

ಸ್ವದೇಶದವನೂ ವಿದ್ವಾಂಸನೂ ವಾಗ್ಮಿಯೂ ಪಂಡಿತನೂ ಪ್ರತಿಭಾಶಾಲಿಯೂ, ಪ್ರಾಮಾಣಿಕನೂ ಸತ್ಯವಂತನೂ ಆದವನನ್ನು ಮಾತ್ರ ರಾಯಭಾರಿಯನ್ನಾಗಿ ನೇಮಿಸಬೇಕು. ಮನುಶಾಸ್ತ್ರದಲ್ಲಿ ಸರ್ವಶಾಸ್ತ್ರವಿಶಾರದನಾಗಿರುವ, ವರ್ತನೆಗಳಿಂದಲೂ ಮುಖಲಕ್ಷಣಗಳಿಂದಲೂ ಹೃದಯದ ಅಭಿಪ್ರಾಯವೇನಿರಬಹುದೆಂದು ತಿಳಿಯಲು ಸಮರ್ಥನಾಗಿರುವ, ಅಂತಃಶ್ಶುದ್ಧಿ, ಬಹಿಶ್ಶುದ್ಧಿಗಳಿಂದ ಕೂಡಿರುವ ದಕ್ಷನಾದ ಸತ್ಕುಲಪ್ರಸೂತನಾದವನನ್ನು ಮಾತ್ರವೇ ರಾಜದೂತನನ್ನಾಗಿ ನಿಯಮಿಸಿಕೊಳ್ಳಬೇಕು.

### ಸೇನಾಧಿಪತಿ

ಕಚ್ಚಿದ್ಧೃಷ್ಟಶ್ಚ ಶೂರಶ್ಚ ಧೃತಿಮಾನ್ ಮತಿಮಾನ್ ಶುಚಿಃ |
ಕುಲೀನಶ್ಚಾನುರಕ್ತಶ್ಚ ದಕ್ಷಃ ಸೇನಾಪತಿಃ ಕೃತಃ || (೩೦)

ಸೈನ್ಯದ ಸೇನಾಧಿಪತಿ ಸಂತುಷ್ಟನೂ ಶೂರನೂ ಧೈರ್ಯಶಾಲಿಯೂ ಬುದ್ಧಿವಂತನೂ ಶುದ್ಧನೂ ಸತ್ಕುಲಪ್ರಸೂತನೂ ರಾಜನಲ್ಲಿ ಅನುರಕ್ತನೂ ಕಾರ್ಯದಲ್ಲಿ ದಕ್ಷನೂ ಆಗಿರಬೇಕು.

ಸೇವಕರು, ಅವರ ವೇತನ, ಸೈನಿಕರ ಭತ್ಯ ಇತ್ಯಾದಿ

ಕಚ್ಚಿನ್ಮುಖ್ಯಾ ಮಹತ್ಸ್ವೇವ ಮಧ್ಯಮೇಷು ಚ ಮಧ್ಯಮಾಃ |
ಜಘನ್ಯಾಸ್ತು ಜಘನ್ಯೇಷು ಭೃತ್ಯಾಃ ಕರ್ಮಸು ಯೋಜಿತಾಃ || (೨೫)

ಪ್ರಥಮ ಶ್ರೇಣಿಯ ಸೇವಕರನ್ನು ಉತ್ತಮ ಕಾರ್ಯಗಳಲ್ಲೂ, ಮಧ್ಯಮ ಶ್ರೇಣಿಯ ಸೇವಕರನ್ನು ಸಾಮಾನ್ಯವಾದ ಕೆಲಸಗಳಲ್ಲೂ ಕೆಳದರ್ಜೆಯ ಸೇವಕರನ್ನು ಕನಿಷ್ಠ ಶ್ರೇಣಿಯ ಕಾರ್ಯಗಳಲ್ಲೂ ನಿಯೋಜಿಸಬೇಕು. ರಾಜ್ಯಕ್ಕೆ ಆಗುವ ನಷ್ಟವನ್ನೂ ಹಾನಿಯನ್ನೂ ತಪ್ಪಿಸಬೇಕು.

ಕಚ್ಚಿದ್ಬಲಸ್ಯ ಭಕ್ತಂ ಚ ವೇತನಂ ಚ ಯಥೋಚಿತಮ್ |
ಸಂಪ್ರಾಪ್ತಕಾಲಂ ದಾತವ್ಯಂ ದದಾಸಿ ನ ವಿಲಂಬಸೇ || (೩೨)

ಕಾಲಾತಿಕ್ರಮಣಾಚ್ಚೈವ ಭಕ್ತವೇತನಯೋರ್ಭೃತಾಃ |
ಭರ್ತುಃ ಕುಪ್ಯಂತಿ ದುಷ್ಯಂತಿ ಸೋಽನರ್ಥಃ ಸುಮಹಾನ್ ಸ್ಮೃತಃ ||(೩೩)

ಸೈನಿಕರಿಗೆ ಮತ್ತು ಸೇವಕರಿಗೆ ಸಕಾಲಕ್ಕೆ ವೇತನವನ್ನು ವಿಳಂಬ ಮಾಡದೆ ಕೊಡುತ್ತಿರಬೇಕು. ಹಾಗೆ ಸಿಕ್ಕದಿದ್ದರೆ ಅವರು ಆಳುವವರ ಬಗ್ಗೆ ಕೋಪಗೊಳ್ಳುತ್ತಾರೆ ಮತ್ತು ದೂಷಿಸುತ್ತಾರೆ. ಪ್ರಜೆಗಳ ಅಸಮಾಧಾನದಿಂದ ದೇಶಕ್ಕೆ ಅನರ್ಥವುಂಟಾಗುತ್ತದೆ. ಸೈನಿಕರು ದೇಶದ ಗಡಿಗಳನ್ನು ರಕ್ಷಿಸುವರು. ಯುದ್ಧದಲ್ಲಿ ತಮ್ಮ ಪ್ರಾಣವನ್ನು ಪಣವಾಗಿಟ್ಟು ರಕ್ಷಿಸುವ ಸೈನಿಕರನ್ನು ಎಲ್ಲರೂ ಗೌರವಿಸಬೇಕು. ಅವರು ಎಂದಿಗೂ ಯಾವ ರೀತಿಯ ತೊಂದರೆಗಳಿಗೂ ಒಳಗಾಗಬಾರದು.

ನ್ಯಾಯ ತೀರ್ಪು

ವ್ಯಸನೇ ಕಚ್ಚಿದಾಢ್ಯಸ್ಯ ದುರ್ಗತಸ್ಯ ಚ ರಾಘವ |
ಅರ್ಥಂ ವಿರಾಗಾಃ ಪಶ್ಯಂತಿ ತವಾಮಾತ್ಯಾ ಬಹುಶ್ರುತಾಃ| (೫೮)

ಒಬ್ಬ ಶ್ರೀಮಂತ ಹಾಗೂ ಬಡವನ ನಡುವೆ ವ್ಯವಹಾರದಲ್ಲಿ ಘರ್ಷಣೆಯುಂಟಾಗಿ ಅವರಿಬ್ಬರೂ ನ್ಯಾಯಕ್ಕಾಗಿ ಮಂತ್ರಿಗಳ ಸಹಾಯ ಕೋರಿದಾಗ ಅವರು ಧನದಾಸೆಯಿಂದ ಶ್ರೀಮಂತನಿಗೆ ಅನುಕೂಲವಾಗುವಂತೆ ತೀರ್ಪುಕೊಡಬಾರದು. ನ್ಯಾಯಾನ್ಯಾಯಗಳನ್ನು ಸಂಪೂರ್ಣವಾಗಿ ವಿಮರ್ಶಿಸಿ ತೀರ್ಪು ಕೊಡಬೇಕು.

ದಂಡನೆ

ಕಚ್ಚಿನ್ನೋಗ್ರೇಣ ದಂಡೇನ ಭೃಶಮುದ್ವೇಜಿತಪ್ರಜಮ್ |
ರಾಷ್ಟ್ರಂ ತವಾನುಜಾನಂತಿ ಮಂತ್ರಿಣಃ ಕೇಕಯೀಸುತ || (೨೭)

ಅಪರಾಧಿಗಳಿಗೆ ಪ್ರಜೆಗಳಿಗೆ ಉಗ್ರವಾದ ಶಿಕ್ಷೆಗಳನ್ನು ವಿಧಿಸಬಾರದು. ಅಪರಾಧವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅಪರಾಧಕ್ಕನುಗುಣವಾದ ಶಿಕ್ಷೆಯನ್ನು ವಿಧಿಸಬೇಕು. ಇಲ್ಲದಿದ್ದರೆ ಅವರು ಉದ್ವಿಗ್ನರಾಗಿ ರಾಜನಿಗೆ ಅವಮಾನ ಮಾಡುತ್ತಾರೆ. ಅವನಿಗೆ ವಿರುದ್ಧವಾಗಿ ವರ್ತಿಸುತ್ತಾರೆ. ಆದ್ದರಿಂದ ದಂಡಕ್ಕಿಂತಲೂ ಪ್ರಜೆಗಳ ವಿಶ್ವಾಸ ಮತ್ತು ಅಭಿಮಾನ ಆಳುವ ಅರಸನಿಗೆ ಅತಿ ಮುಖ್ಯವಾದುದು.

ಆಯ ವ್ಯಯ

ಆಯಸ್ತೇ ವಿಪುಲಃ ಕಚ್ಚಿತ್ಕಚ್ಚಿದಲ್ಪತರೋ ವ್ಯಯಃ |
ಅಪಾತ್ರೇಷು ನ ತೇ ಕಚ್ಚಿತ್ಕೋಶೋ ಗಚ್ಛತಿ ರಾಘವ || (೫೪)

ರಾಜ್ಯದ ಆದಾಯವು ವಿಪುಲವಾಗಿರಬೇಕು. ವ್ಯಯ ಆದಾಯಕ್ಕಿಂತ ಕಡಿಮೆಯಾಗಿರಬೇಕು. ದೇಶದ ಆಯ-ವ್ಯಯಗಳ ಪಟ್ಟಿ (Budget)ಯನ್ನು ತಯಾರಿಸುವುದು ರಾಜ್ಯಾಂಗದ ಮುಖ್ಯವಾದ ಭಾಗ. ಸರ್ಕಾರದ ಅಥವಾ ರಾಜ್ಯದ ಹಣ ಅಪಾತ್ರರಿಗೆ ಕೊಡುವ ದಾನದಲ್ಲೋ ಅಥವಾ ನಿಷ್ಪ್ರಯೋಜಕ ಯೋಜನೆಗಳಲ್ಲೋ ಎಂದಿಗೂ ಅಪವ್ಯಯವಾಗಬಾರದು. ಬೊಕ್ಕಸದ ಮೇಲ್ವಿಚಾರಣೆಯ ಅಧಿಕಾರವನ್ನು ಅಯೋಗ್ಯರಿಗೆ ಕೊಡಬಾರದು.

ತೆರಿಗೆ

ಇನ್ನು ರಾಜ್ಯದಲ್ಲಿ ಪ್ರಜೆಗಳಿಗೆ ತೆರಿಗೆ ವಿಧಿಸುವ ಬಗ್ಗೆ ಹೇಳುತ್ತಾ, "ದುಂಬಿಗಳು ಪುಷ್ಪಗಳಿಂದ ರಸವನ್ನು ಹೀರಿಕೊಳ್ಳುವ ರೀತಿಯಲ್ಲಿ ಪ್ರಜೆಗಳಿಗೆ ಅರಿವಾಗದಂತೆ, ಅವರಿಗೆ ಹೊರೆಯಾಗದಂತೆ ಸಂಗ್ರಹಿಸಬೇಕು. ದಂಡೋಪಾಯದ ಮೂಲಕ ತೆರಿಗೆಗಳನ್ನು ಜನರ ಮೇಲೆ ಹೇರಬಾರದು. ಅದನ್ನು ನ್ಯಾಯವಾದ ರೀತಿ ಯಲ್ಲಿ ತಾರತಮ್ಯವಿಲ್ಲದೆ ಎಲ್ಲರಿಂದಲೂ ಅವರವರ ಶಕ್ತ್ಯಾನುಸಾರ ಸಂಗ್ರಹಿಸಬೇಕು ಎನ್ನುತ್ತಾನೆ ಪ್ರಭು ರಾಮಚಂದ್ರ.

ದುರ್ಗಗಳಲ್ಲಿ ಅನುಕೂಲ

ಕಚ್ಚಿದ್ದುರ್ಗಾಣಿ ಸರ್ವಾಣಿ ಧನಧಾನ್ಯಾಯುಧೋದಕೈಃ |
ಯಂತ್ರೈಶ್ಚ ಪರಿಪೂರ್ಣಾನಿ ತಥಾಶಿಲ್ಪಿಧನುರ್ಧರೈಃ || (೫೩)

ರಾಜ್ಯದ ಎಲ್ಲ ದುರ್ಗಗಳಲ್ಲೂ ಧನಧಾನ್ಯ ಸಮೃದ್ಧಿಯಾಗಿರಬೇಕು. ಸಾಮಾನ್ಯ ಪ್ರಜೆಗೆ ಯಾವ ರೀತಿಯ ಕೊರತೆಯೂ, ತೊಂದರೆಯೂ ಉಂಟಾಗಬಾರದು, ಆಯುಧಗಳು ಪರಿಪೂರ್ಣವಾಗಿದ್ದು ಯೋಧರು ಸನ್ನದ್ಧರಾಗಿರಬೇಕು. ನೀರಿನ ಸರಬರಾಜು ಸಮೃದ್ಧವಾಗಿರಬೇಕು. ೧) ಜಲದುರ್ಗ (ಅಗಳು, ನದಿ ಮೊದಲಾದುವು) ೨) ಪರ್ವತ ದುರ್ಗ (ಬೆಟ್ಟಗಳ ಸಾಲು) ೩)ವೃಕ್ಷ ದುರ್ಗ (ಸುತ್ತ ಕಾಡು) ೪) ಐರಿಣದುರ್ಗ (ಚೌಗುಭೂಮಿ) ೫) ಧಾನ್ವದುರ್ಗ (ಮರುಭೂಮಿ). ಈ ಎಲ್ಲ ಐದು ದುರ್ಗಗಳಲ್ಲೂ ಮತ್ತು ಇವೆಲ್ಲಕ್ಕಿಂತಲೂ ಸುಭದ್ರವಾದ ಪ್ರಜಾದುರ್ಗದಲ್ಲೂ ಎಲ್ಲ ರೀತಿಯ ಅನುಕೂಲಗಳಿರಬೇಕು.

ಹೀಗೆ ಒಂದು ರಾಜ್ಯ ಆದರ್ಶ ರಾಜ್ಯವಾಗಬೇಕಾದರೆ ರಾಜ, ರಾಜ್ಯಾಂಗದ ಎಲ್ಲ ಕೇಂದ್ರಗಳು, ಕೇಂದ್ರ ಮುಖ್ಯಸ್ಥರು, ಸಾಮಾನ್ಯ ಪ್ರಜೆಗಳು ಪ್ರತಿಯೊಬ್ಬನಿಗೂ ಸಮಾನತೆ, ಪ್ರಾಮುಖ್ಯ ಕೊಡಬೇಕು. ಯಾವುದರಲ್ಲೂ ಉದಾಸೀನತೆ ತೋರಬಾರದು. ಒಂದು ರಾಷ್ಟ್ರದ ನಾಯಕನಾಗುವುದು ಎಂದರೆ ಸುಖದ ಸುಪ್ಪತ್ತಿಗೆಯ ಮೇಲೆ ನಿದ್ರಿಸಿದಂತಲ್ಲ. ಹಗಲೂ ಇರುಳೂ ಎಚ್ಚರದಿಂದಿದ್ದು ಪ್ರಜೆಗಳ ಯೋಗಕ್ಷೇಮಕ್ಕಾಗಿ, ಅವರ ಅಭ್ಯುದಯಕ್ಕಾಗಿ ತನ್ನೆಲ್ಲ ಸುಖವನ್ನು ತ್ಯಾಗಮಾಡಿ ರಾಜ್ಯಭಾರ ಮಾಡುವುದೇ "ರಾಮರಾಜ್ಯ" ಸಾರುವ ರಾಜ್ಯಾಡಳಿತದ ಮೂಲತತ್ತ್ವ.